## Work of Nada-Shirashyad Road.

*Q.—347. Sri J. L. KABADI (Baradol).—

Will the Government be pleased to state:—

(*a*) whether it is a fact that the Chief Executive Officer, Indi Taluk Development Board, has accepted tenders of a contractor who has quoted the highest rates on the work of Nada-Shirashyad Road;

(*b*) when the tenders were accepted and work sanctioned by the Chief Executive Officer, Indi;

(*c*) whether it is a fact that the C.E.O. has taken the acceptance from the Taluk Development Board on 25th June 1963 of the tender of the said work, *i.e.*, after completion of the work;

(*d*) whether it is a fact that the C.E.O., Indi, has ordered under No. TDB/PWD-SR, dated 28th March 1963 to start the work of Rs. 9,200 and the measurements of the work in full was recorded on 25th March 1963 uy the Overseer and check measured by the C.E.O. on 29th March 1963 ?

(*e*) whether it is a fact that the C.E.O., Indi has ordered under No. TDB-PWD-SR, dated 2nd April 1963 to the contractor to complete the work within 31st March 1963 ?

A.—Sri R. M. PATIL (Minister for Development, Panchayat Raj and Co-operation).—

(*a*) Yes, in consultation with the President of the Board.

(*b*) Tender was accepted on 16th March 1963. Work order was issued on 23rd March 1963 by the C.E.O.

(*c*) Yes. The Taluk Development Board approved the action taken by the C.E.O. in its meeting held on 25th June 1963.

(*d*) Yes.

(*e*) No.

ಶ್ರೀ ಜೆ. ಎಲ್. ಕಬಾಡಿ.—ಈ ಕೆಲಸದ ಬಗ್ಗೆ ವಿವರವಾಗಿ ದಾಖಲೆಗಳನ್ನು ಕೊಟ್ಟನಂತರ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ?

ಶ್ರೀ ಆರ್. ಎಂ. ಪಾಟೀಲ್.—ಯಾವುದು ಕಾನೂನಿಗೆ ಅನುಸಾರವಾಗಿ ಯೋಗ್ಯವಾದ ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತದೆ.

ಶ್ರೀ ಜೆ. ಎಲ್. ಕಬಾಡಿ.—ಈ ರಸ್ತೆ ಕೆಲಸ ಮುಗಿದಿದೆ ಎಂದು ಸರ್ಕಾರದವರು ಹೇಳುತ್ತಾರೆಯೇ ?

Sri R. M. PATIL.—I do not follow the question.

ಶ್ರೀ ಜೆ. ಎಲ್. ಕಬಾಡಿ.—ಈ ರಸ್ತೆಗೆ 23ನೇ ಮಾರ್ಚ್‌ನೊಳಗೆ ವರ್ಕ್ ಆರ್ಡರ್ ಕೊಟ್ಟು 9,200 ರೂಪಾಯಿಗಳ ಈ ಕಾಮಗಾರಿ ಪೂರ್ತಿ ಮುಗಿಸರಾಗಿದೆ ಎಂದು ಕಂಟ್ರಾಕ್ಟರ್ ಹೇಳಿದ ಮೇಲೆ 29ನೇ ಮಾರ್ಚ್ ಇವರು ಅದನ್ನು ಪರಿಶೀಲಿಸಿ ಪೂರ್ತಿ ಕೆಲಸವಾಗಿದೆಯೆಂದು ಅವರಿಗೆ ಸರ್ಕಾರ ದುಡ್ಡು ಕೊಟ್ಟಿದ್ದಾರೆಯೇ ?

ಶ್ರೀ ಆರ್. ಎಂ. ಪಾಟೀಲ್.—ದುಡ್ಡು ಕೊಟ್ಟಿದ್ದು ಬಿಟ್ಟಿದ್ದು ಇದರೊಳಗೆ ಆ ಮಾಹಿತಿ ಇಲ್ಲ. ಆದರೆ ಆ ಕೆಲಸ ಪೂರ್ತಿಯಾದುದು 29ನೇ ಮಾರ್ಚ್ 63ರಲ್ಲಿ. ಆದರೆ ಅಲ್ಲಲ್ಲಿ ಸ್ವಲ್ಪ ವ್ಯತ್ಯಾಸ

ವೇನಾದರೂ ಇದ್ದರೆ ಅದನ್ನೆಲ್ಲಾ 31ನೇ ಮಾರ್ಚ್ 1963ರೊಳಗೆ ಪೂರ್ತಿ ಮಾಡಬೇಕೆಂದು ಹೇಳಿದೆ ಎಂದು 2ನೇ ಏಪ್ರಿಲ್ 63ರಲ್ಲಿ ಮಂಡಲ ಅಧ್ಯಕ್ಷರು ಸರ್ಕಾರಕ್ಕೆ ಆ ಮಾಹಿತಿ ಕೊಟ್ಟಿದ್ದು.

ಶ್ರೀ ಸಿದ್ದಯ್ಯ ಕಾಶೀಮಠ್.—ಈ ಕೆಲಸದಲ್ಲಿ ಹಣ ದುರುಪಯೋಗವಾಗಿರುವ ಬಗ್ಗೆ ಸರ್ಕಾರಕ್ಕೆ ವರದಿಗಳು ಬಂದಿವೆಯೇ ? ಹಾಗಿದ್ದರೆ ಈಗ ಸರ್ಕಾರದವರು ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ ?

ಶ್ರೀ ಆರ್. ಎಂ. ಪಾಟೀರ್.—ಈ ಪ್ರಶ್ನೆ ಬಂದಿದೆ ಉಳಿದ ಅಪ್ಲಿಕೇಷನ್ಸ್ ಬಗ್ಗೆ ಏನು ದೂರೂ ಬಂದಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹಿಂದಿದ್ದ ಮಂತ್ರಿಗಳಿಗೆ ಬಂದಿದೆಯೇ ?

ಶ್ರೀ ಆರ್. ಎಂ. ಪಾಟೀರ್.—ಅವನ್ನು ವಿಚಾರಿಸಬೇಕು.

ಶ್ರೀ ಎನ್. ನಂಜೇಗೌಡ.—ಟೆಂಡರ್ ಎಷ್ಟು ಬಂದುದು ? ರೋಯೆಸ್ಟ್ ಟೆಂಡರ್ ಎಷ್ಟು ?

ಶ್ರೀ ಆರ್. ಎಂ. ಪಾಟೀರ್.—ಎರಡು. ಒಂದು ಶೇ. ಆರು, ಹೆಚ್ಚುವರಿ ಇನ್ನೊಂದು ಶೇ. 5½. ಹೆಚ್ಚುವರಿ ಶೇ. 6ರಂತೆ ಕೊಟ್ಟಿದ್ದವರು. ಐದುಕ್ಕಾಲರಂತೆ ಆ ಕೆಲಸವನ್ನು ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿದರು. ಆದರೆ ಐದುಕ್ಕಾಲರಂತೆ ಕೊಟ್ಟಿದ್ದ ಟೆಂಡರುದಾರರು ಅಪ್ರೂವ್ಡ್ ಕಂಟ್ರಾಕ್ಟರ್ ಆಗಿರಲಿಲ್ಲ. ಶೇ. ಆರರಂತೆ ಕೊಟ್ಟಿದ್ದವರು ಪಿ.ಡಬ್ಲ್ಯ್ಯೂ.ಡಿ. ಅಪ್ರೂವ್ಡ್ ಕಂಟ್ರಾಕ್ಟರ್ ಆಗಿದ್ದರು. ಅವರು ಆದರದ ಮೇಲೆ ಮಾಡುತ್ತೇವೆಂದು ಒಪ್ಪಿಕೊಂಡರು. ಅವರಿಗೇ ಕೊಟ್ಟಿದೆ.

ಶ್ರೀ ಜೆ. ಎರ್. ಕಬಾಡಿ.—2ನೇ ಏಪ್ರಿಲ್‌ನಲ್ಲಿ ಆದೇಶ ನೀಡಿದ್ದರೂ ಆ ಪ್ರಕಾರ ತಾರೀಖು 31ನೇ ಮಾರ್ಚ್‌ನೊಳಗೆ ಆ ಕೆಲಸವನ್ನು ಪೂರ್ತಿ ಮಾಡಬೇಕು. ಅದಕ್ಕಾಗಿ ಖರ್ಚು ಹಾಕಿದೆ ಎಂದು ಹೇಳಿದ್ದಾರೆ. ಆದರೆ ಈ ಕೆಲಸ ಮುಗಿಯುವುದರೊಳಗೆ ಪಿ. ಡಬ್ಲ್ಯ್ಯೂ. ಡಿ. ಕಂಟ್ರಾಕ್ಟರಿಗೆ ದುಡ್ಡನ್ನು ಕೊಟ್ಟಿದ್ದು ಅಪರಾಧವಲ್ಲವೇ ?

ಶ್ರೀ ಆರ್. ಎಂ. ಪಾಟೀರ್.—ಅಲ್ಪ ಸ್ವಲ್ಪ ಕೆಲಸ ಉಳಿದಿರಬಹುದೆಂದು ದುಡ್ಡು ಕೊಟ್ಟಿದ್ದು. ವರದಿಯೊಳಗೆ 25ನೇ ಮಾರ್ಚ್ 63ಕ್ಕೆ ಕೆಲಸ ಮುಗಿದಿದೆ ಎಂದು ಬರೆದಿದೆ.

ಶ್ರೀ ಸಿದ್ದಯ್ಯ ಕಾಶೀಮಠ್.—23ನೇ ಮಾರ್ಚ್ 63ರಲ್ಲಿ ವರ್ಕ್ ಆರ್ಡರ್ ಕೊಟ್ಟಮೇಲೆ 29ನೇ ಮಾರ್ಚ್ 63ರಲ್ಲಿ ಚೀಫ್ ಎಗ್ಜಿಕ್ಯುಟಿವ್ ಆಫೀಸರ್ ಅವರು ಅದನ್ನು ಪೂರ್ತಿ ಪರಿಶೀಲನೆ ಮಾಡಿದ್ದಾರೆಂದು ಹೇಳಿದೆ. ಈ ಕಾಮಗಾರಿಗೆ ಖರ್ಚು 9,200 ರೂಪಾಯಿಗಳಾದರೆ ಇದರಿಂದ ಎಷ್ಟು ಯಾವಾಗ ಮುರಂ ಕಲೆಕ್ಷನ್ ಆಗುತ್ತದೆ ?

ಶ್ರೀ ಆರ್. ಎಂ. ಪಾಟೀರ್.—16ನೇ ತಾರೀಖಿನ ದಿವಸ ಟೆಂಡರನ್ನು ಒಪ್ಪಿಕೊಂಡರು. ಕಂಟ್ರಾಕ್ಟರ್ ಅಲ್ಲರುವಾಗಲೇ 17ನೇ ತಾರೀಖಿನ ದಿವಸದಿಂದಲೇ ಈ ಕೆಲಸವನ್ನು ತೆಗೆದು ಕೊಂಡರು ಎಂಬುದಾಗಿ ಡೆಪ್ಯೂಟಿ ಕಮಿಷನರ್ ಅವರು ವರದಿ ಮಾಡಿದ್ದಾರೆ. ಅದರ ಮೇಲೆ ಮುರಂ ಕಲೆಕ್ಷನ್ ಸ್ವಲ್ಪಮಟ್ಟಿಗೆ 10—15 ದಿವಸಗಳಲ್ಲ ಆಗಬಹುದು.

ಶ್ರೀ ಜೆ. ಎರ್. ಕಬಾಡಿ.—ಇದರ ಬಗ್ಗೆ ಪೂರ್ತಿ ಮಾಹಿತಿಯನ್ನು ತರಿಸಿಕೊಂಡು ಅದರಲ್ಲ ದೋಷ ಕಂಡು ಬಂದರೆ ಅದರ ಬಗ್ಗೆ ಸರ್ಕಾರದವರು ಕ್ರಮ ತೆಗೆದುಕೊಳ್ಳುತ್ತೀರಾ ?

Mr. SPEAKER —This is purely a hypothetical question.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—3-4 ದಿವಸಗಳಲ್ಲ ಆಷ್ಟೊಂದು ಶೀಘ್ರವಾಗಿ ಕೆಲಸವನ್ನು ಮುಗಿಸುವಂತಹ ಕಂಟ್ರಾಕ್ಟರು ನಮ್ಮ ದೇಶದಲ್ಲ ಯಾರಾದರೂ ಇದ್ದಾರೆಯೇ ! ಬಿಲ್ಲು ಕೊಟ್ಟ ಮೇಲೆ ಕಲೆಕ್ಷನ್ ಮಾಡಿದ್ದಾರೆಯೇ ಅಥವಾ ಕೊಡದೆ ಮಾಡಿದ್ದಾರೆಯೇ ?

ಶ್ರೀ ಆರ್. ಎಂ. ಪಾಟೀರ್.—ಮೂರು ನಾಲ್ಕು ಐಟಂ ಕೆಲಸ ಮಾಡಿದ್ದಾರೆ. ಕೆಲಸ ಮಾಡದೇ ಬಿಲ್ಲು ಕೊಟ್ಟರೆ ಅವರ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದು ಕೊಳ್ಳುತ್ತೇವೆ.

ಶ್ರೀ ಜೆ. ಎರ್. ಕಬಾಡಿ.—ಕಂಟ್ರಾಕ್ಟರಿಗೆ ಆದೇಶ ನೀಡಿದ್ದು ನಿಜವಲ್ಲ ಎಂದು ಹೇಳಿದ್ದೀರಿ, ನೀವು ಆದೇಶಕೊಡದೆ ತಾರೀಖು 3ನೇ ಏಪ್ರಿಲ್ 1963ನೇ ದಿನಾಂಕ ಆಫೀಸಿನಲ್ಲ ರೆಕಾರ್ಡ್ ಹೇಗೆ ಆಯಿತು ! ಹೀಗಿದ್ದರೂ ಸಹ ಈ ಕಾಮಗಾರಿಯ ಬಗ್ಗೆ ಕಂಟ್ರಾಕ್ಟರಿಗೆ ಆದೇಶ ನೀಡಿದ್ದು ನಿಜವಲ್ಲ ಎಂದು ಹೇಳಿದ್ದೀರಿ. ಇದರ ಬಗ್ಗೆ ಸರ್ಕಾರದ ಅಭಿಪ್ರಾಯವೇನು ?

ಶ್ರೀ ಆರ್. ಎಂ. ಪಾಟೀರ್.—ಮಾನ್ಯ ಸದಸ್ಯರು ಪೂರ್ತಿ ಪ್ರಶ್ನೆಗೆ ಉತ್ತರವನ್ನು ತೆಗೆದು ಕೊಂಡಿಲ್ಲ. The Chief Executive Officer issued orders on 2-4-63 to complete the work before 31-3-63, ಆ ವಿಷಯ ಏನಿದೆ ಅದು ನಿಜವಲ್ಲ ಎಂದು ಹೇಳಿದೆ.

ಶ್ರೀ ಎಚ್. ಡಿ. ದೇವೇಗೌಡ.—ಆ ಚೆಂಡರನ್ನು ಅಭಿವೃದ್ಧಿ ಮಂಡಳಿಯ ಚೀಫ್ ಎಗ್ಸಿಕ್ಯುಟೀವ್ ಆಫೀಸರು ಒಪ್ಪಿಕೊಳ್ಳುವಾಗ ತಾಲ್ಲೂಕು ಅಭಿವೃದ್ಧಿ ಮಂಡಲೆಯವರು ಒಪ್ಪಿಕೊಂಡಿರಲಿಲ್ಲ ಎಂದು ಹೇಳಿದ್ದೀರಿ, 25-6-1963 ರಂದು ನಡೆದ ತಾಲ್ಲೂಕು ಅಭಿವೃದ್ಧಿಯ ಮಂಡಲೆಯ ಸಭೆಯಲ್ಲಿ ಚೀಫ್ ಎಗ್ಸಿಕ್ಯುಟೀವ್ ಅಧಿಕಾರಿಯವರು ಕೈಕೊಂಡ ಕ್ರಮವನ್ನು ಒಪ್ಪಿಕೊಳ್ಳುವ ಸನ್ನಿವೇಶದಲ್ಲಿ ಚೀಫ್ ಎಗ್ಸಿಕ್ಯುಟೀವ್ ಆಫೀಸರು 23-3-63ರಲ್ಲಿ ಹೇಗೆ ವರ್ಕ್ ಆರ್ಡರ್ ಕೊಟ್ಟರು ?

ಶ್ರೀ ಆರ್. ಎಂ. ಪಾಟೀಲ್.—ಮೊದಲು ಆ ಕಾಮಗಾರಿಯ ಬಗ್ಗೆ ಎಗ್ಸಿಕ್ಯೂಟೀವ್ ಆಫೀಸರು ಏನು ಆರ್ಡರನ್ನು ಮಾಡಿದ್ದರೋ ಅದನ್ನು ಅಮೇಲೆ ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡಿನವರು ರ್ಯಾಟಿಫೈ ಮಾಡಿದ್ದಾರೆ.

ಶ್ರೀ ಸಿದ್ದಯ್ಯ ಕಾಶೀಮಠ್.—ಈ ಕೆಲಸಗಳ ಸಂಬಂಧದಲ್ಲಿ ಹಣ ದುರುಪಯೋಗವಾಗಿದೆ ಎಂದು ತಿಳಿದುಬಂದಿದೆ. ಆದಕಾರಣ ಇದನ್ನು ತಕ್ಷಣ ಸ್ಪೆಷಲ್ ಆಗಿ ಎಚಾರಣೆ ಮಾಡಿ ಯೋಗ್ಯ ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಆರ್. ಎಂ. ಪಾಟೀಲ್.—ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇನೆ.

ಶ್ರೀ ಜೆ. ಎಲ್. ಕಬಾಡಿ.—ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದಮೇಲೆ ನಾನು ಮತ್ತೆ ಪ್ರಶ್ನೆಯನ್ನು ಹಾಕುವುದಿಲ್ಲ.

Mr. SPEAKER.—I will hold-over the Questions Nos. 116, 293, 366 and 455 pertaining to the Hon'ble Minister for Revenue, as he is unable to attend the meeting to-day.

---

## Construction of Yagachi Dam.

* *Q.*—413. Sri B. H. LAKSHMANAIAH. (Belur).—

Will the Government bepleased to state :—

(*a*) whether Chickabyadagere site near Belur was finally selected for the construction of Yegachi Dam proposed by them ;

(*b*) whether it is a fact that Ryots Association and other Institutions of Belur Taluk have represented to them a year back to select the site whichever is feasible after surveying Ranaghatta site which irrigates equal extent of land with a lesser submersion ?

*A.*—Sri S. NIJALINGAPPA (Chief Minister).—

(*a*) Yes.
(*b*) No.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ಬೇಲೂರು ತಾಲ್ಲೂಕು ರೈತ ಸಂಘದವರು ಹಾಗೂ ಇತರ ಸಂಸ್ಥೆಗಳವರು ತಮ್ಮನ್ನು ಭೇಟಿ ಮಾಡಿ ಮನವಿಯನ್ನು ಸಲ್ಲಿಸಿದಮೇಲೆ ಯಗಚಿ ಅಣೆಕಟ್ಟಿನ ನಿವೇಶನದ ಬಗ್ಗೆ ಚೀಫ್ ಇಂಜಿನಿಯರಿಗೆ ಬರೆದು ಪರಿಶೀಲನೆ ಮಾಡುತ್ತೇವೆಂದು ಭರವಸೆ ಕೊಟ್ಟಿರಲಿಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಹಿಂದೆ ಭರವಸೆ ಕೊಟ್ಟಿದ್ದೆ. ವಿಚಾರ ಮಾಡಿದಮೇಲೆ ಆ ಅಣೆಕಟ್ಟು ಕಟ್ಟಲು ಚಿಕ್ಕ ಬ್ಯಾಡಗೆರೆ ಸೈಟು ಸರಿಯಾಗಿದೆ ಎಂದು ಕಂಡುಬಂದದ್ದರಿಂದ ಅದನ್ನು ಆಯ್ಕೆ ಮಾಡಿದೆ. ಅದನ್ನು ಬಿಟ್ಟು ಬೇರೆ ಕಡೆ ಕಟ್ಟಿದರೆ ಬೇಲೂರು ಮುಳುಗಡೆಯಾಗಿ ಹೋಗುತ್ತದೆ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ಈಗ ಆ ಅಣೆಕಟ್ಟನ್ನು ಚಿಕ್ಕ ಬ್ಯಾಡಗೆರೆ ಸೈಟಿನಲ್ಲಿ ಕಟ್ಟುವುದರಿಂದ ಅಲ್ಲಿ ನೀರಾವರಿ ಇರತಕ್ಕ ಉತ್ಕೃಷ್ಟವಾವ ಕೃಷಿ ಜಮೀನು ಮುಳುಗಡೆಯಾಗುತ್ತದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಮತ್ತು ರಣಘಟ್ಟ ಸೈಟಿನ ಬಳಿ ಆ ಅಣೆಕಟ್ಟನ್ನು ಕಟ್ಟುವುದರಿಂದ ಸಾಗುವಳಿ ಜಮೀನು ಕಡಿಮೆ ಮುಳುಗಡೆಯಾಗುತ್ತದೆ. ಆದ್ದರಿಂದ ಇದನ್ನು ಸರ್ಕಾರದವರು ಪುನರ್ ಪರಿಶೀಲನೆ ಮಾಡುತ್ತೀರಾ ?